<u>2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.</u>

ಸಿ.ಸಿ. ನಂ.1642-2011

ಸಿಡಬ್ಲ್ಯೂ.2 ಪಿಡಬ್ಲ್ಯೂ3

ಸಾಕ್ಷಿಯ ಹೆಸರು - ಶ್ರೀಕಾಂತ ಪುಂಡಲಿಕ ಬಂಡಿ

ವಯಸ್ಸು - 35 ವರ್ಷ

ಉದ್ಯೋಗ - ಗೌಂಡಿ

ವಾಸ - ಮಾಲದಿನ್ನಿ

ದಿನಾಂಕಃ 24-01-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ</u>

ಚಾಸಾ-1 ರವರ ಪರಿಚಯ ಇಲ್ಲ. ನಾನು ಸಹಿ ಮಾಡುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇದ್ದು, ಸದ್ರಿ ದಾಖಲೆಯು ಘಟನಾ ಸ್ಥಳ ಪಂಚನಾಮೆಯಾಗಿದ್ದು, ಅದನ್ನು ನಿ.ಪಿ.2 ಅಂತಾ ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ.ಪಿ.2 ಎ ಅಂತಾ ಗುರುತಿಸಲಾಯಿತು. ಸದ್ರಿ ಸಹಿಯನ್ನು ಪೊಲೀಸರು 5-6 ವರ್ಷಗಳ ಹಿಂದೆ ಪಡೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಲಿಲ್ಲ. ನಿ.ಪಿ.2 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)

<u>ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದ</u>

ದಿಃ 16-09-2011 ರಂದು ಮುಂಜಾನೆ 10.00 ಗಂಟೆ ಸುಮಾರಿಗೆ ಪೊಲೀಸರು ನನ್ನನ್ನು ಕರೆಯಿಸಿ ಚಾಸಾ-1 ರವರ ಮಾಲದಿನ್ನಿ ಕ್ರಾಸದಲ್ಲಿ ಇರುವ ಚಾಸಾ-1 ರವರ ಚಹಾದ ಅಂಗಡಿಯ ಮುಂದೆ ಚಾಸಾ-6 ರವರು ತೋರಿಸಿದಂತೆ ಗುನ್ಹಾ ಸ್ಥಳದ ಪಂಚನಾಮೆಯನ್ನು ಬೆಳಿಗ್ಗೆ 10.00 ರಿಂದ 11.00 ರವರೆಗೆ ಮಾಡಿ ನನ್ನ ಸಹಿಯನ್ನು ಪಡೆದುಕೊಂಡರು ಅಂದರೆ ಸರಿಯಲ್ಲ. ನಿ.ಪಿ.2 ನ್ನು ಸ್ಥಳದಲ್ಲಿಯೇ ತಿಳಿದುಕೊಂಡು ಸಹಿ ಮಾಡಿದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ</u>

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಸಹಿ/-

(ಮೋಹನ ಸದಾಶಿವ ಪೋಳ)

2 ನೇ ಹೆ.ದಿ.&ನ್ಯಾದಂ., ಗೋಕಾಕ.